# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 146 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 05-07-2023 |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಂದಾಯ ಇಲಾಖೆಯ ಸ್ಥಾನಿಕ ಸಮಸ್ಯೆಗಳ ಕುರಿತು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಗಳನ್ನು ಪರಿಶೀಲಿಸಲಾಗುತ್ತಿದೆಯೇ; ಸದರಿ ಮನವಿಗಳಲ್ಲಿರುವ ಅಂಶಗಳನ್ನು ಕ್ರೋಢೀಕರಿಸಿ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿದ್ದಾರೆಯೇ, ಸರ್ಕಾರ ಈ ಕುರಿತು ಸ್ಪಂದಿಸಿದೆಯೇ; (ಇತ್ತಿಚೀನ 03 ವರ್ಷಗಳ ಜಿಲ್ಲಾವಾರು ವಿವರ ನೀಡುವುದು) | ಹೌದು, ಎಲ್ಲಾ ಮನವಿಗಳಲ್ಲಿರುವ ಅಂಶಗಳನ್ನು ಕ್ರೋಢೀಕರಿಸಿ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸುವ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಕ್ರಮವಹಿಸಲಾಗುತ್ತಿದೆ.<br><br>**ಇತ್ತಿಚೀನ 03 ವರ್ಷಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.** |
| ಆ) | ನಿರ್ದಿಷ್ಟವಾಗಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಂದಾಯ ಅದಾಲತ್, ಗ್ರಾಮ ವಾಸ್ತವ್ಯ, ಜನಸ್ಪಂದನ ಕಾರ್ಯಕ್ರಮಗಳಲ್ಲಿ ಕೆಲವು ಸ್ಥಾನಿಕ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳನ್ನು ಪಟ್ಟಿ ಮಾಡಿ ಪರಿಹರಿಸಲು ಕ್ರಮವಹಿಸಿದೆಯೇ; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಅದಾಲತ್, ಗ್ರಾಮ ವಾಸ್ತವ್ಯ ಕಾರ್ಯಕ್ರಮಗಳು ನಡೆಯುತ್ತಿದ್ದು, ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲಾಗುತ್ತಿದೆ. **ಹಾಗೂ** ಉಡುಪಿ ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ಸ್ಥಾನಿಕ ಸಮಸ್ಯೆಗಳ ಬಗ್ಗೆ ಗ್ರಾಮ ವಾಸ್ತವ್ಯ ಜನಸ್ಪಂದನ ಮತ್ತು ಕಂದಾಯ ಅದಾಲತ್ ಕಾರ್ಯಕ್ರಮಗಳಲ್ಲಿ ಮನವಿಗಳನ್ನು ಸ್ವೀಕರಿಸಿ ಸದರಿ ಮನವಿಗಳನ್ನು ಜಿಲ್ಲಾಧಿಕಾರಿಯವರ ಹಾಗೂ ತಹಶೀಲ್ದಾರ್ ಹಂತದಲ್ಲಿಯೆ ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುತ್ತಿದೆ. |
| ಇ) | ದಕ್ಷಿಣ ಕನ್ನಡ/ಉಡುಪಿ ಜಿಲ್ಲೆಗಳಲ್ಲಿ ಭೂಪರಿವರ್ತನೆ ಮಾಡುವಾಗ ಉದ್ಭವಿಸುವ ಸಮಸ್ಯೆಗಳಾದ ಖಾಸಗಿ ಸಂಪರ್ಕ ರಸ್ತೆ, ರಸ್ತೆ ಅಂಚು, ಸಿಆರ್‌ಝಡ್ ಮತ್ತು ವಿವಿಧ ವಲಯಗಳು, ಆರ್‌ಆರ್‌ಟಿಸಿಆರ್ ಹೊಂದಾಣಿಕೆ ಬರದೆ ಇರುವ ಪ್ರಕರಣಗಳು, ಮೂಲ ಕಡತ ಇಲ್ಲ ಎಂದು ಭೂ ಪರಿವರ್ತನೆ ತಿರಸ್ಕರಿಸುವುದು, ಭೂ ಪರಿವರ್ತನೆಯನ್ನು ಪಹಣಿಯಲ್ಲಿ ದಾಖಲಿಸದಿರುವುದು, ದರ್ಖಾಸ್ತು ಪ್ಲಾಟಿಂಗ್ ಆಗದಿರುವುದು, ಜಾಗ ವಿಭಜನೆಯ ಪೋಡಿ ಆಗದಿರುವುದು, ಭೂ ಪರಿವರ್ತನೆಯಲ್ಲಿ ಅಗತ್ಯ ವಿಧಗಳು ಇಲ್ಲದಿರುವುದು, ಮೂಲಗೇಣಿ ಸಮಸ್ಯೆ | ಹೌದು<br><br>ಸರ್ಕಾರದ ಆದೇಶ ಸಂ.ಆರ್‌ಡಿ/156/ಎಲ್.ಜಿ.ಪಿ. 2020 (ಇ), ದಿನಾಂಕ:21-09-2020ರಲ್ಲಿನ ಮಾನದಂಡಗಳ ಅನುಸಾರ ಭೂ-ಪರಿವರ್ತನೆಗೆ ಕ್ರಮವಹಿಸಲಾಗುತಿದೆ ಹಾಗೂ ಭೂ ಪರಿವರ್ತನೆಯನ್ನು ಪಹಣಿಯಲ್ಲಿ ಇಂಡೀಕರಿಸಲಾಗುತ್ತಿದೆ. ಭೂರಿವರ್ತನೆಯಲ್ಲಿ ಪ್ರಮುಖ ವಿಧಗಳು: ವಸತಿ, ವಾಣಿಜ್ಯ ಮತ್ತು ಕೈಗಾರಿಕೆ.<br><br>ಮಾಹೆ **ಮೇ-2023** ರ ಅಂತ್ಯಕ್ಕೆ ಮೋಜಿಣಿ ತಂತ್ರಾಂಶದಲ್ಲಿ ದರಖಾಸ್ತು ಪೋಡಿ ಅಳತೆಗಾಗಿ **ಉಡುಪಿ** ಜಿಲ್ಲೆಯಲ್ಲಿ **1896** ಮತ್ತು **ದಕ್ಷಿಣ ಕನ್ನಡ** ಜಿಲ್ಲೆಯಲ್ಲಿ **3407** ಕಡತಗಳು ಸ್ವೀಕೃತವಾಗಿ ಬಾಕಿ ಇರುತ್ತವೆ ಮೋಜಿಣಿ ತಂತ್ರಾಂಶದಲ್ಲಿ ದರಖಾಸ್ತು ಪೋಡಿ ಕೋರಿ ಅರ್ಜಿ ಸ್ವೀಕೃತ ವಾದ, ತಕ್ಷಣವೇ ಕಡತವನ್ನು ತಹಶೀಲ್ದಾರರು ಕಛೇರಿಗೆ ಸುತ್ತೋಲೆ |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td>ಇತ್ಯಾದಿ ದೀರ್ಘಾವಧಿ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಪರಿಹರಿಸಲು/ ಪ್ರಕ್ರಿಯೆಗಳನ್ನು ಸರಳೀಕರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)</td><td>ಸಂ.ತಾಂತ್ರಿಕ.ದರಖಾಸ್ತು.ಪೋಡಿ. ಆಂದೋಲನ. 40/2008 -09 ದಿ:20-10-2008 ರನ್ವಯ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಿ ಮಂಜೂರಿ ದಾಖಲೆಗಳ ನೈಜತೆ ಖಾತ್ರಿಪಡಿಸಿಕೊಂಡು ದೃಢೀಕೃತ ಪ್ರತಿಯೊಂದಿಗೆ ಪೋಡಿ ದುರಸ್ತಿ ಕುರಿತು ಭೂಮಾಪನಾ ಶಾಖೆಗೆ ಸಲ್ಲಿಸಲು ನೀಡಲಾಗುತ್ತಿದೆ. ಅದರಂತೆ ಸಂಬಂದಿಸಿದ ಎಲ್ಲಾ ಅಧಿಕಾರಿಗಳು ನಮೂನೆ 1 ರಿಂದ 5 ಅನ್ನು ದೃಢೀಕರಿಸಿ ನಿಯಮಾನುಸಾರ ಮೂಲ ಕಡತವನ್ನು ಭೂಮಾಪನ ಶಾಖೆಗೆ ಕಳುಹಿಸಿದ ನಂತರ ಭೂಮಾಪನ ಶಾಖೆಯಲ್ಲಿ ಭೂಮಾಪಕರ ಲಭ್ಯತೆ ಅನುಗುಣವಾಗಿ ಅಳತೆ ಕೆಲಸ ನಿರ್ವಹಿಸಿ ಸುತ್ತೋಲೆ ಸಂ. ತಾಂತ್ರಿಕ.ಆಡಳಿತ.ಸುತ್ತೋಲೆ.29/2009-10 ದಿನಾಂಕ: 25-1-2010 ರನ್ವಯ ನಮೂನೆ 6 ರಿಂದ 10 ಅನ್ನು ಭರ್ತಿ ಮಾಡಿ ದುರಸ್ತಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮೂಲ ಮಂಜೂರಿ ಕಡತ ಲಭ್ಯವಿಲ್ಲದ ಪ್ರಕರಣಗಳಲ್ಲಿ ಸರ್ಕಾರದ ಸುತ್ತೋಲೆ ಸಂ.ಆರ್.ಡಿ.74.ಎಲ್.ಜಿ.ಪಿ.2009 ದಿನಾಂಕ:17.09.2009 ಮತ್ತು ಕಂಇ 08 ಎಲ್.ಜಿ.ಪಿ 2016 ದಿನಾಂಕ:20.06.2016 & ದಿನಾಂಕ:18-07-2016 ರನ್ವಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಗೈರುವಿಲೇ ಕಡತ ಪುನರ್ ನಿರ್ಮಾಣದ ಸಮಿತಿಯಲ್ಲಿ ಮಂಡಿಸಿ, ಸೂಕ್ತ ಆದೇಶವಾದ ನಂತರ ಕಡತ ಪುನರ್ ನಿರ್ಮಾಣ ಮಾಡಿಕೊಂಡು, ಪೋಡಿ ದುರಸ್ತಿ ಕ್ರಮ ವಹಿಸಲಾಗುತ್ತಿದೆ.<br><br><u>ಮಾಹೆ ಮೇ-2023 ರ ಅಂತ್ಯಕ್ಕೆ ದಕ್ಷಿಣ ಕನ್ನಡ/ಉಡುಪಿ ಜಿಲ್ಲೆಗಳಲ್ಲಿ ಖಾಸಗಿ ಜಮೀನುಗಳ ಪೋಡಿ (ತತ್ಕಾಲ್ ಪೋಡಿ) ಪ್ರಕರಣಗಳ ಕುರಿತು ಪ್ರಗತಿ ವಿವರ</u><br><br>
<table>
<tr><th>ಜಿಲ್ಲೆ</th><th>ಪ್ರಾ. ಶಿಲ್ಕು</th><th>ಸ್ವೀಕೃತಿ</th><th>ಒಟ್ಟು</th><th>ವಿಲೇ</th><th>ಬಾಕಿ</th><th>ಕಂದಾಯ ಶಾಖೆ ಯಲ್ಲಿ ಬಾಕಿ</th><th>ಭೂಮಾಪನ ಶಾಖೆ ಯಲ್ಲಿ ಬಾಕಿ</th></tr>
<tr><td>ಉಡುಪಿ</td><td>4462</td><td>623</td><td>5085</td><td>569</td><td>4516</td><td>2361</td><td>2155</td></tr>
<tr><td>ದಕ್ಷಿಣ ಕನ್ನಡ</td><td>2623</td><td>562</td><td>3185</td><td>541</td><td>2644</td><td>1705</td><td>939</td></tr>
</table>
<br>ಮಾಹೆ <u>ಮೇ-2023</u> ರ ಅಂತ್ಯಕ್ಕೆ ತತ್ಕಾಲ್ ಪೋಡಿ ಕೋರಿ ಉಡುಪಿ ಜಿಲ್ಲೆಯಲ್ಲಿ 623 ಅರ್ಜಿಗಳು ಸ್ವೀಕೃತವಾಗಿದ್ದು ಹಿಂದಿನ ಬಾಕಿ 4462 ಸೇರಿದಂತೆ ಒಟ್ಟು 5085 ಅರ್ಜಿಗಳಿದ್ದು. ಈ ಪೈಕಿ ಸದರಿ ಮಾಹೆ 569 ಅರ್ಜಿಗಳನ್ನು ವಿಲೇ ಮಾಡಲಾಗಿದೆ. ಇನ್ನು 2361 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ಕಂದಾಯ ಶಾಖೆಯಲ್ಲಿ ಮತ್ತು ಉಳಿದ 2155 ಅರ್ಜಿಗಳು ಭೂಮಾಪನ ಶಾಖೆಯಲ್ಲಿ ಅಳತೆಗಾಗಿ ಬಾಕಿ ಇರುತ್ತವೆ ಮತ್ತು ಅದೇ ರೀತಿಯಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 562 ಅರ್ಜಿಗಳು ಸ್ವೀಕೃತವಾಗಿದ್ದು ಹಿಂದಿನ ಬಾಕಿ 2623 ಸೇರಿದಂತೆ ಒಟ್ಟು 3185 ಅರ್ಜಿಗಳಿದ್ದು. ಈ ಪೈಕಿ ಸದರಿ ಮಾಹೆ 541 ಅರ್ಜಿಗಳನ್ನು ವಿಲೇ ಮಾಡಲಾಗಿದೆ. ಇನ್ನು 1705 ಅರ್ಜಿಗಳು ಪಹಣಿ ತಿದ್ದುಪಡಿಗಾಗಿ ಕಂದಾಯ ಶಾಖೆಯಲ್ಲಿ ಮತ್ತು ಉಳಿದ 939 ಅರ್ಜಿಗಳು ಭೂಮಾಪನ ಶಾಖೆಯಲ್ಲಿ ಅಳತೆಗಾಗಿ ಬಾಕಿ ಇರುತ್ತವೆ ಸದರಿ ಅರ್ಜಿಗಳ ವಿಲೇವಾರಿ ಕುರಿತು ಕೂಡಲೇ ಕ್ರಮ ಕೈಗೊಳ್ಳಲಾಗುವುದು</td></tr>
</table>

| ಕ್ರ ಸಂ | ಪ್ರಶ್ನೆ | ಉತ್ತರ |
| --- | --- | --- |
| | | **ಬಾಕಿಯಿರುವ ದರಖಾಸ್ತು/ತತ್ಕಾಲ್ ಪೋಡಿ ಅರ್ಜಿಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು**<br><br>1. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್.ಲೈನ್ ನಲ್ಲಿ ಸ್ವೀಕರಿಸ ಲಾಗುತ್ತಿದ್ದು. ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿ ನಂತೆ) ಅಳವಡಿಸಲಾಗಿದೆ, ಸರದಿ ಸಾಲಿನಂತೆ ಅಳತೆಗಾಗಿ ಭೂಮಾಪ ಕರಿಗೆ ತಂತ್ರಾಂಶದ ಮೂಲಕ ಆನ್.ಲೈನ್.ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿ ಅಳತೆಯಾದ ನಂತರ ಭೂಮಾಪಕರುಗಳಿಗೆ ಕಡತಗಳು ಹಂಚಿಕೆಯಾದಂತೆ ಸರದಿ ಸಾಲಿನಂತೆ ಆನ್.ಲೈನ್.ನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತ ಗಳ ಪರಿಶೀಲನೆ ಮತ್ತು ಅನುಮೋ ದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್.ಲೈನ್ .ನಲ್ಲೇ ಸರದಿ ಸಾಲಿನಂತೆ ನಿರ್ವಹಿಸುವ ಮೂಲಕ, ಪ್ರಕರಣಗಳ ವಿಲೆವಾರ ಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲ ದಂತೆ ಕ್ರಮವಹಿಲಾಗುತ್ತಿದೆ.<br>2. ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಬಗ್ಗೆ ಕಂದಾಯ ಅದಾಲತ್ .ಗಳನ್ನು ನಡೆಸಲಾಗುತ್ತಿದೆ<br>3. ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಮಂಜೂರಿ ಸಂಬಂಧಿಸಿದ ಕಡತಗಳನ್ನು Cataloging and Indexing ಮಾಡಲು ಸರ್ಕಾರದಿಂದ ಸೂಚಿಸಿದ್ದು, ಅದರಂತೆ ಕಂದಾಯ ಇಲಾಖೆಯಿಂದ ಕ್ರಮ ವಹಿಸಲಾಗುತ್ತಿದೆ.<br>4. ಪಹಣಿಯಲ್ಲಿನ ಮಾಲಿಕರ ಹೆಸರು/ಪೌತಿ ಖಾತೆ., ಇತ್ಯಾದಿಗಳ ಕುರಿತಂತೆ ತಿದ್ದುಪಡಿ ಮಾಡುವ ಸಂಬಂದ ಕಂದಾಯ ಇಲಾಖೆಯಿಂದ ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.<br>5. ಸರ್ಕಾರದ ಸೂಚನೆಯನ್ವಯ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳ ನ್ನು ನೀಡಲಾಗಿದೆ.<br>6. ವಿಡಿಯೋ ಸಂವಾದ ಮತ್ತು ವಿಭಾಗವಾರು/ಜಿಲ್ಲಾವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>7. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರ ನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>8. ಸರ್ಕಾರದ ಸೂಚನೆಯಂತೆ ಹೆಚ್ಚಿನ 2000 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಸನ್ 2023 ರಲ್ಲಿ ಅರ್ಜಿಗಳನ್ನು ಆಹ್ವಾನಿಸಿದ್ದು, ದಿನಾಂಕ 8-7-2023 ರಂದು ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲು ನಿರ್ದರಿಸಲಾಗಿದೆ, ಸಾಮಾನ್ಯ ಪರೀಕ್ಷೆ ನಂತರ ಅರ್ಹ ಅಭ್ಯರ್ಥಿ ಗಳನ್ನು ಆಯ್ಕೆ ಮಾಡಿ, ತರಬೇತಿ ನೀಡಿ, ತರಬೇತಿಯಲ್ಲಿ ತೇರ್ಗಡೆ ಯಾದ ಅರ್ಹ ಅಭ್ಯರ್ಥಿಗಳಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜನೆ ಮಾಡ ಲಾಗುವುದು<br><br>ಇದರಿಂದ ಬಾಕಿ ವಿವಿಧ ಪೋಡಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ. |
| ಈ | ಸದರಿ ಜಿಲ್ಲೆಗಳಲ್ಲಿರುವ ಗೋಮಾಳ | **<u>ದಕ್ಷಿಣ ಕನ್ನಡ ಜಿಲ್ಲೆ</u>** |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td>ಭೂಮಿಯೆಷ್ಟು; ಅದರಲ್ಲಿ ಅತಿಕ್ರಮಣವಾಗಿದ್ದೆಷ್ಟು; ಇತರ ಉದ್ದೇಶಕ್ಕೆ ಬಳಸಿದ್ದೆಷ್ಟು; ಮತ್ತು ಅದಕ್ಕೆ ಅವಕಾಶವಿದೆಯೇ: ಪ್ರಸ್ತುತ ವಾಸ್ತವವಾಗಿ ಎಷ್ಟು ಜಾಗ ಉಳಿದಿದೆ? (ಸುತ್ತೋಲೆಗಳು ಮತ್ತು ಅಂಕಿ-ಅಂಶಗಳ ಸಹಿತ ವಿವರ ನೀಡುವುದು)</td><td>
ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಟ್ಟು ಗೋಮಾಳ ಭೂಮಿ ವಿಸ್ತೀರ್ಣ:5628.3961 ಎಕರೆ ಆಗಿರುತ್ತದೆ.<br>ಗೋಮಾಳಗಳ ಒತ್ತುವರಿ ವಿಸ್ತೀರ್ಣ:1264.4486 ಎಕರೆ ಆಗಿರುತ್ತದೆ. ಉಳಿಕೆ ವಿಸ್ತೀರ್ಣ 4363.9475ಎಕರೆ ಆಗಿರುತ್ತದೆ.
ಗೋಮಾಳ ಜಮೀನನ್ನು ಇತರೆ ಉದ್ದೇಶಗಳಿಗೆ ಬಳಸುವ ಬಗ್ಗೆ ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್.ಡಿ.o2.ಎಲ್.ಜಿ.ಪಿ.2021, ದಿನಾಂಕ: 24-04-2022ರಂತೆ ಹಾಗೂ ಕರ್ನಾಟಕ ಭೂಮಂಜೂರಾತಿ ನಿಯಮಾವಳಿ 1966ರ ನಿಯಮ 97(4) ರಡಿ ಉಲ್ಲೇಖವಿರುತ್ತದೆ.
<u>ಉಡುಪಿ ಜಿಲ್ಲೆಯ ಗೋಮಾಳ ವಿವರ</u>
<table>
<tr><th>ತಾಲ್ಲೂಕು</th><th>ಸರ್ವೆ ನಂಬರ್‌ಗಳ ಸಂಖ್ಯೆ</th><th>ವಿಸ್ತೀರ್ಣ (ಎ)</th></tr>
<tr><td>ಉಡುಪಿ</td><td>109</td><td>572.14</td></tr>
<tr><td>ಕಾಪು</td><td>45</td><td>314.87.50</td></tr>
<tr><td>ಕಾರ್ಕಳ</td><td>122</td><td>740.40</td></tr>
<tr><td>ಹೆಬ್ರಿ</td><td>54</td><td>106.82</td></tr>
<tr><td>ಬ್ರಹ್ಮಾವರ</td><td>60</td><td>443.68.75</td></tr>
<tr><td>ಕುಂದಾಪುರ</td><td>119</td><td>867.14</td></tr>
<tr><td>ಬೈಂದೂರು</td><td>35</td><td>112.90</td></tr>
<tr><td>ಒಟ್ಟು</td><td>544</td><td>3157.96.25</td></tr>
</table>
ಕಾಪು ತಾಲ್ಲೂಕಿನಲ್ಲಿ 5.08ಎಕರೆ, ಕುಂದಾಪುರ ತಾಲ್ಲೂಕಿನಲ್ಲಿ 632.17.6 ಎಕರೆ, ಬ್ರಹ್ಮಾವರ ತಾಲ್ಲೂಕಿನಲ್ಲಿ 24.85ಎಕರೆ ಒತ್ತುವರಿ ವಿಸ್ತೀರ್ಣ ಇರುತ್ತದೆ. (ಒತ್ತುವರಿಯಾದ ಗೋಮಾಳ ಜಮೀನುಗಳಿಗೆ ನಮೂನೆ 50, 53, 57, 94ಸಿ, 94ಸಿಸಿ ರಡಿಯಲ್ಲಿ ಅರ್ಜಿಗಳು ದಾಖಲಿರುತ್ತದೆ ಹಾಗೂ ಗೇರು ಪ್ಲಾಂಟೇಷನ್, ರಸ್ತೆ, ಅರಣ್ಯ ಇಲಾಖೆ ನೆಡು ತೋಪು, ಇತ್ಯಾದಿಯವರ ಸ್ವಾಧೀನತೆಯಲ್ಲಿರುವುದರಿಂದ್ದ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ) ಗೋಮಾಳ ಜಮೀನನ್ನು ಇತರೆ ಉದ್ದೇಶಗಳಿಗೆ ಬಳಸಲು ಸರ್ಕಾರದ ಸುತ್ತೋಲೆ ಸಂಖ್ಯೆ ಆರ್ ಡಿ ೦2 ಎಲ್ ಜಿ ಪಿ 2021 ದಿನಾಂಕ:24-02-2022 ರಂತೆ ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ 1996ರ ನಿಯಮ 97(4)ರಡಿ ಉಲ್ಲೇಖವಿರುತ್ತದೆ. ಸದರಿ ಸುತ್ತೋಲೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.
</td></tr>
</table>

**ಸಂಖ್ಯೆ: ಕಂ.ಇ 120 ಸಮಿತಿ 2023**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು